ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 331(193)
ಸದಸ್ಯರ ಹೆಸರು : ಶ್ರೀ ಎನ್. ರವಿಕುಮಾರ್ (ವಿಧಾನ ಸಭೆಯಿಂದ ಚುನಾಯಿತರಾದವರು)
ಉತ್ತರಿಸುವ ದಿನಾಂಕ : 18.07.2019
ಉತ್ತರಿಸುವ ಸಚಿವರು : ಸನ್ಮಾನ್ಯ ಮುಖ್ಯಮಂತ್ರಿಯವರು

ಕ್ರ ಸಂ.	ಪ್ರಶ್ನೆ	ಉತ್ತರ
ಅ.	ರಾಜ್ಯದ ಐಎಎಸ್., ಮತ್ತು ಐಪಿಎಸ್., ಅಧಿಕಾರಿಗಳ ಮೇಲೆ ಅಕ್ರಮ ಆಸ್ತಿ ಹೊಂದಿದ ಮತ್ತು ಲಂಚ ಪಡೆದ ಆರೋಪಗಳಿವೆ: (ವಿವರ ನೀಡುವುದು)	ಹೌದು. **ಐ.ಎ.ಎಸ್. ಅಧಿಕಾರಿಗಳಿಗೆ ಸಂಬಂಧಿಸಿದಂತೆ.** **ಅಕ್ರಮ ಆಸ್ತಿ ಪ್ರಕರಣ:** ಶ್ರೀ. ಕಪಿಲ್ ಮೋಹನ್, ಭಾ.ಆ.ಸೇ., ಇವರ ವಿರುದ್ಧ ಬೆಂಗಳೂರು ನಗರ ಲೋಕಾಯುಕ್ತ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ಮೊಕದ್ದಮೆ ಸಂಖ್ಯೆ: 64/2015 ರ ತನಿಖೆ ಪೂರ್ಣಗೊಳಿಸಿ ನ್ಯಾಯಾಲಯಕ್ಕೆ “ಬಿ” ಅಂತಿಮ ವರದಿಯನ್ನು ಸಲ್ಲಿಸಲಾಗಿರುತ್ತದೆ ಎಂದು ದಿನಾಂಕ: 14.06.2019 ರ ಪತ್ರದಲ್ಲಿ ಅಪರ ಪೊಲೀಸ್ ಮಹಾನಿರ್ದೇಶಕರು, ಕರ್ನಾಟಕ ಲೋಕಾಯುಕ್ತ ಇವರು ಸರ್ಕಾರಕ್ಕೆ ತಿಳಿಸಿರುತ್ತಾರೆ. **ಲಂಚ ಪ್ರಕರಣ:** ಶ್ರೀ ಗಂಗಾ ರಾಮ್ ಬಡೇರಿಯಾ, ಭಾ.ಆ.ಸೇ.. ಕರ್ನಾಟಕ ರಾಜ್ಯ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯಲ್ಲಿ ಆಯುಕ್ತರು/ ನಿರ್ದೇಶಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಅವಧಿಯಲ್ಲಿ, ಅಕ್ರಮ ಗಣಿಗಾರಿಕೆಗೆ ಸಂಬಂಧಿಸಿದಂತೆ ಲೋಕಾಯುಕ್ತ ದಾಖಲಿಸಿಕೊಂಡಿರುವ ಮೊಕದ್ದಮೆ ಸಂಖ್ಯೆ 10/2015 ರಲ್ಲಿ ಹಾಗೂ 17/2014 ರ ಪ್ರಕರಣದ ತನಿಖೆಯು ಪ್ರಗತಿಯಲ್ಲಿರುತ್ತದೆ.

		ಶ್ರೀ. ಬಿ.ಎಂ. ವಿಜಯಶಂಕರ್, ಭಾ.ಆ.ಸೇ., ಇವರ ವಿರುದ್ಧ ಐಎಂಎ ಬಹುಕೋಟಿ ವಂಚನೆ ಹಗರಣಕ್ಕೆ ಸಂಬಂಧಿಸಿದಂತೆ ಕಮರ್ಷಿಯಲ್ ಸ್ಟ್ರೀಟ್ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ಪ್ರಕರಣ ಸಂಖ್ಯೆ 73/2019 ವು ತನಿಖಾ ಹಂತದಲ್ಲಿರುತ್ತದೆ. **<u>ಐ.ಪಿ.ಎಸ್. ಅಧಿಕಾರಿಗಳಿಗೆ ಸಂಬಂಧಿಸಿದಂತೆ:</u>** ಅಕ್ರಮ ಆಸ್ತಿ ಪ್ರಕರಣ 1) ಶ್ರೀ ಎಂ.ಸಿ.ನಾರಾಯಣ ಗೌಡ, ಐಪಿಎಸ್ (ನಿವೃತ್ತ) ಹಿಂದಿನ ಐಜಿಪಿ, ಅರಣ್ಯ ಘಟಕ, ಬೆಂಗಳೂರು ಇವರ ವಿರುದ್ಧ ದಾಖಲಾಗಿದ್ದ ಅಕ್ರಮ ಆಸ್ತಿ ಹೊಂದಿರುವ ಪ್ರಕರಣದ ಮೊಕದ್ದಮೆ ಸಂಖ್ಯೆ: 7/2009 ರಲ್ಲಿ ಲೋಕಾಯುಕ್ತವು ಪ್ರಕರಣ ದಾಖಲಿಸಿಕೊಂಡಿದ್ದು, ವಿಚಾರಣ ನ್ಯಾಯಾಲಯದ ಆದೇಶದ ವಿರುದ್ಧ ಉಚ್ಚ ನ್ಯಾಯಾಲಯದಲ್ಲಿ ಮೇಲ್ಮನವಿ ಸಂಖ್ಯೆ: 827/2016 ರನ್ನು ಸಲ್ಲಿಸಲಾಗಿದ್ದು, ಮುಂದಿನ ಬೆಳವಣಿಗೆಯನ್ನು ನಿರೀಕ್ಷಿಸಲಾಗಿದೆ. 2) ಶ್ರೀ ಡಿ.ಸಿ. ರಾಜಪ್ಪ, ಐಪಿಎಸ್ (ನಿವೃತ್ತ):- ಆದಾಯಕ್ಕಿಂತ ಹೆಚ್ಚಿನ ಆಸ್ತಿ ಹೊಂದಿದ ಆರೋಪದ ಮೇಲೆ ಲೋಕಾಯುಕ್ತ ಸಂಸ್ಥೆ ದಾಳಿ ನಡೆಸಿ, ಪ್ರಕರಣ ಸಂಖ್ಯೆ: 6/2008ಅನ್ನು ದಾಖಲಿಸಿರುತ್ತದೆ. ಕೇಂದ್ರ ಗೃಹ ಮಂತ್ರಾಲಯವು ದಿನಾಂಕ 9/2/2018 ರಂದು ಅಧಿಕಾರಿಯವರ ವಿರುದ್ಧ ಅಭಿಯೋಜನಾ ಮಂಜೂರಾತಿಗೆ ಆದೇಶ ಹೊರಡಿಸಿದೆ. ಲೋಕಾಯುಕ್ತದಿಂದ ಮುಂದಿನ ಬೆಳವಣಿಗೆಯನ್ನು ನಿರೀಕ್ಷಿಸಲಾಗಿದೆ.

		ಲಂಚ ಪ್ರಕರಣ 1. ಶ್ರೀ ಬಿ. ಶ್ರೀಕಂಠಪ್ಪ, ಐಪಿಎಸ್ (ನಿವೃತ್ತ):- ಇವರು ಈ ಹಿಂದೆ ಎಸ್‌ಪಿ, ಚಾಮರಾಜನಗರ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಸಂದರ್ಭದಲ್ಲಿ ಲಂಚದ ಹಣ ಸ್ವೀಕರಿಸಿದ್ದರ ಮೇರೆಗೆ ಮೊಕದ್ದಮೆ ಸಂಖ್ಯೆ: 02/2008ಅನ್ನು ದಾಖಲಿಸಲಾಗಿದೆ. ಮಾನ್ಯ ವಿಶೇಷ ಸತ್ರ ನ್ಯಾಯಾಲಯ, ಮೈಸೂರು ಇವರ ದಿನಾಂಕ: 21.06.2016ರ ಆದೇಶದಲ್ಲಿ ಆಪಾದಿತರನ್ನು ಆರೋಪ ಮುಕ್ತಗೊಳಿಸಲಾಗಿದೆ. ಈ ತೀರ್ಪಿನ ಮೇಲೆ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಲೋಕಾಯುಕ್ತ ವತಿಯಿಂದ ಮೇಲ್ಮನವಿ ಕ್ರಿಮಿನಲ್ ಅಪೀಲು ಸಂಖ್ಯೆ:2151/2016 ಅನ್ನು ಸಲ್ಲಿಸಲಾಗಿದ್ದು, ಮುಂದಿನ ಬೆಳವಣಿಗೆಯನ್ನು ನಿರೀಕ್ಷಿಸಲಾಗಿದೆ. 2. ಶ್ರೀ ಕೆ.ಪಿ. ಪುಟ್ಟಸ್ವಾಮಿ, ಐಪಿಎಸ್ (ನಿವೃತ್ತ):- ಇವರು ಈ ಹಿಂದೆ ಎಸ್‌ಪಿ, ಕೋಲಾರ ಜಿಲ್ಲೆ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ಲಂಚದ ಹಣವನ್ನು ಸ್ವೀಕರಿಸುತ್ತಿದ್ದ ಸಂದರ್ಭದಲ್ಲಿ ಸಿಕ್ಕಿ ಬಿದ್ದಿದ್ದು, ಲೋಕಾಯುಕ್ತದಲ್ಲಿ ಮೊಕದ್ದಮೆ ಸಂಖ್ಯೆ: 75/2009 ಪ್ರಕರಣ ದಾಖಲಾಗಿದೆ. ಮಾನ್ಯ ವಿಶೇಷ ಸತ್ರ ನ್ಯಾಯಾಲಯ, ಕೋಲಾರ ಇವರ ದಿನಾಂಕ: 27.03.2017ರ ಆದೇಶದಲ್ಲಿ ಆರೋಪ ಮುಕ್ತಗೊಳಿಸಿದ್ದು, ನ್ಯಾಯಾಲಯದ ಈ ತೀರ್ಪಿನ ಮೇಲೆ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಮೇಲ್ಮನವಿಯನ್ನು ಸಲ್ಲಿಸಲು ದಿನಾಂಕ: 14.09.2017ರಲ್ಲಿ ಒಳಾಡಳಿತ ಇಲಾಖೆಯು ಅನುಮತಿಯನ್ನು ನೀಡಿದೆ. ಮುಂದಿನ ಬೆಳವಣಿಗೆಯನ್ನು ನಿರೀಕ್ಷಿಸಲಾಗಿದೆ.

ಆ.	ರಾಜ್ಯದ ಎಷ್ಟು ಐಎಎಸ್ ಮತ್ತು ಐಪಿಎಸ್ ಅಧಿಕಾರಿಗಳ ಮೇಲೆ ಕ್ರಿಮಿನಲ್ ಪ್ರಕರಣಗಳು ದಾಖಲಾಗಿವೆ: ಪ್ರಸ್ತುತ ಅವು ಯಾವು ಹಂತದಲ್ಲಿವೆ:	**<u>ಐ.ಎ.ಎಸ್. ಅಧಿಕಾರಿಗಳಿಗೆ ಸಂಬಂಧಿಸಿದಂತೆ:</u>** ಶ್ರೀ ಗಂಗಾ ರಾಮ್ ಬಡೇರಿಯಾ, ಭಾ.ಆ.ಸೇ., ಕರ್ನಾಟಕ ರಾಜ್ಯ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯಲ್ಲಿ ಆಯುಕ್ತರು/ ನಿರ್ದೇಶಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಅವಧಿಯಲ್ಲಿ, ಅಕ್ರಮ ಗಣಿಗಾರಿಕೆಗೆ ಸಂಬಂಧಿಸಿದಂತೆ ಲೋಕಾಯುಕ್ತ ದಾಖಲಿಸಿಕೊಂಡಿರುವ ಮೊಕದ್ದಮೆ ಸಂಖ್ಯೆ 10/2015 ರಲ್ಲಿ ಹಾಗೂ 17/2014 ರ ಪ್ರಕರಣದ ತನಿಖೆಯು ಪ್ರಗತಿಯಲ್ಲಿರುತ್ತದೆ. ಶ್ರೀ. ಬಿ.ಎಂ. ವಿಜಯಶಂಕರ್, ಭಾ.ಆ.ಸೇ., ಇವರ ವಿರುದ್ಧ ಐಎಂಎ ಬಹುಕೋಟಿ ವಂಚನೆ ಹಗರಣಕ್ಕೆ ಸಂಬಂಧಿಸಿದಂತೆ ಕಮರ್ಷಿಯಲ್ ಸ್ಟ್ರೀಟ್ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ಪ್ರಕರಣ ಸಂಖ್ಯೆ 73/2019 ವು ತನಿಖಾ ಹಂತದಲ್ಲಿರುತ್ತದೆ. **<u>ಐಪಿಎಸ್ ಅಧಿಕಾರಿಗಳಿಗೆ ಸಂಬಂಧಿಸಿದಂತೆ:</u>** ಈ ಕೆಳಕಂಡ ಅಧಿಕಾರಿಗಳ ವಿರುದ್ಧ ಭ್ರಷ್ಟಾಚಾರ ನಿಗ್ರಹ ದಳ, ಬೆಂಗಳೂರು ನಗರ ಪೊಲೀಸ್ ಠಾಣೆ, ಬೆಂಗಳೂರು ಇಲ್ಲಿ ನ್ಯಾಯಾಲಯದ ನಿರ್ದೇಶನದ ಮೇಲೆ ಕಲಂ 7, 8, 9, 10, 13 & 15 ಪಿಸಿ ಆಕ್ಟ್ 1988 ಮತ್ತು 415, 420, 464 ಜೊತೆಗೆ 34 ಐಪಿಸಿ ಅಡಿ ಪ್ರಕರಣ ದಾಖಲಾಗಿರುತ್ತದೆ. 1. ಶ್ರೀ ರಾಘವೇಂದ್ರ ಹೆಚ್. ಔರಾದ್‌ಕರ್, ಐಪಿಎಸ್., (ಕೆಎನ್-1987). 2. ಶ್ರೀ ಟಿ.ಆರ್. ಸುರೇಶ್, ಐಪಿಎಸ್., (ಕೆಎನ್-2003). ಪ್ರಕರಣದಲ್ಲಿ ಅಂತಿಮ ವರದಿಯನ್ನು ನ್ಯಾಯಾಲಯಕ್ಕೆ ಭ್ರಷ್ಟಾಚಾರ ನಿಗ್ರಹ ದಳದಿಂದ ಸಲ್ಲಿಸಬೇಕಿರುತ್ತದೆ.

ಇ.	ಕೇಂದ್ರ ಸರ್ಕಾರ ಇತ್ತೀಚೆಗೆ ಲಂಚ ಪಡೆದ ಹಾಗೂ ಆದಾಯಕ್ಕಿಂತ ಹೆಚ್ಚಿನ ಆಸ್ತಿ ಹೊಂದಿದ ಆರೋಪ ಇರುವ ಐಎಎಸ್ ಹಾಗೂ ಐಪಿಎಸ್ ಅಧಿಕಾರಿಗಳನ್ನು ಕಡ್ಡಾಯ ನಿವೃತ್ತಿಯ ಮೇಲೆ ಕಳುಹಿಸಿದಂತೆ ರಾಜ್ಯ ಸರ್ಕಾರವು ಲಂಚ ಪಡೆದ ಹಾಗೂ ಆಧಾಯಕ್ಕಿಂತ ಹೆಚ್ಚಿನ ಆಸ್ತಿ ಹೊಂದಿದ ಆರೋಪ ಇರುವ ಐಎಎಸ್ ಮತ್ತು ಐಪಿಎಸ್ ಅಧಿಕಾರಿಗಳನ್ನು ಕಡ್ಡಾಯ ನಿವೃತ್ತಿಯ ಮೇಲೆ ಕಳುಹಿಸುವ ಕುರಿತು ಸರ್ಕಾರದ ನಿಲುವೇನು?:	ಸದರಿ ವಿಷಯವು ಕೇಂದ್ರ ಸರ್ಕಾರದ ವ್ಯಾಪ್ತಿಗೆ ಒಳಪಟ್ಟಿರುತ್ತದೆ.

(ಹೆಚ್.ಡಿ.ಕುಮಾರಸ್ವಾಮಿ)
ಮುಖ್ಯಮಂತ್ರಿ